


# ಅಹಂಕಾರದ ಬಟ್ಟಲು

ಯೂನಾನಿ ಸಂತ ಆಗಸ್ಟಿನಸ್ ಭಾರವಾದ ಹೃದಯದಿಂದ ಚಿಂತಾಕ್ರಾಂತನಾಗಿ ಸಮುದ್ರದ ದಂಡೆಯಲ್ಲಿ ಅಡ್ಡಾಡುತ್ತಿದ್ದ. ಹಗಲು ರಾತ್ರಿ ಶಾಸ್ತ್ರ ಗ್ರಂಥಗಳ ಅಧ್ಯಯನ ಮಾಡಿ ನಿದ್ದೆಗೆಟ್ಟು, ಸತ್ಯದ ಗುಟ್ಟರಿಯದೆ ದಣಿದಿದ್ದ.

ಸಮೀಪದಲ್ಲಿ ಬಾಲಕನೊಬ್ಬ ಒಂದು ಸಣ್ಣ ಬಟ್ಟಲನ್ನು ಹಿಡಿದುಕೊಂಡು ಚಿಂತಿಸುತ್ತ ನಿಂತಿದ್ದ. ಸಂತನು ಬಾಲಕನನ್ನು ನೋಡಿ ಅಚ್ಚರಿಯಿಂದ ಕೇಳಿದ, "ಮಗು, ನೀನೇನು ಮಾಡುತ್ತಿರುವೆ ಇಲ್ಲಿ? ಏನೋ ಚಿಂತಿಸುತ್ತಿರುವಂತಿದೆ" ಎಂದು.



ಬಾಲಕ : "ನಿನ್ನ ಮುಖದಲ್ಲೂ ಚಿಂತೆ ಎದ್ದು ಕಾಣುತ್ತಿದೆ! ಏನದು ಹೇಳು. ನಮ್ಮಿಬ್ಬರದೂ ಒಂದೇ ಚಿಂತೆ ಇರಬಹುದು. ಸರಿ, ನಿನ್ನ ಬಟ್ಟಲು ಎಲ್ಲಿದೆ?"

ಬಟ್ಟಲ ಮಾತು ಕೇಳಿ ಸಂತನಿಗೆ ನಗು ಬಂತು. ಅವನೆಂದ "ನಾನೂ, ಸತ್ಯದ ಗುಟ್ಟನ್ನರಿಯುವ ಚಿಂತೆಯಲ್ಲಿದ್ದೇನೆ."

ಬಾಲಕ : "ಸರಿ ಸರಿ, ಈ ಸಾಗರವನ್ನು ಈ ಬಟ್ಟಲಲ್ಲಿ ತುಂಬಿ ಮನೆಗೆ ಒಯ್ಯುವುದೆಂತು ಎಂದು ನಾನು ಚಿಂತಿಸುತ್ತಿದ್ದೇನೆ. ಆದರೆ ಈ ಸಾಗರ ಬಟ್ಟಲಲ್ಲಿ ತುಂಬುವುದೇ ಇಲ್ಲ."

ಈಗ ಸಂತನಿಗೆ ಅರ್ಥವಾಯಿತು. "ನಿಜ, ಸಾಗರವನ್ನು ನಮ್ಮ ಬಟ್ಟಲಲ್ಲಿ ತುಂಬಲು ಕಾಯುತ್ತಿರುವ ನಾವಿಬ್ಬರೂ ನಿಜವಾಗಿಯೂ ಬಾಲಕರೆ." ಈಗ ಸಂತನ ಮನಸ್ಸು ಹಗುರವಾಯಿತು. *ನಮ್ಮ ಅಹಂಕಾರದ ಮೂಲಕ ಸತ್ಯವನ್ನು ಅರಿಯಲಾಗುವುದಿಲ್ಲ. ಪ್ರತಿಯೊಬ್ಬರೂ ತಮ್ಮ ಚಿಕ್ಕ ಬಟ್ಟಲಿನಲ್ಲಿ ಸತ್ಯಸಾಗರವನ್ನು ತುಂಬಿಸಲು ಪ್ರಯತ್ನಿಸುತ್ತಾರೆ. ತಮ್ಮ ತಮ್ಮ ಬಟ್ಟಲಿನ ಆಳತೆಗೆ ತಕ್ಕಂತೆ ಸತ್ಯವನ್ನು ಅರಿತುಕೊಂಡು ಅದೇ ಪೂರ್ಣ ಸತ್ಯವೆಂದು ಭ್ರಮಿಸುತ್ತಾರೆ. ಎಲ್ಲ ಧಾರ್ಮಿಕ ಕಲಹಕ್ಕೂ ಇದೇ ಮೂಲ ಕಾರಣ.*